ಹೇಳಿರಲೂ ಇಲ್ಲ. ಇಂತಹ ವಿಷಯಗಳನ್ನು, ನೋವುಗಳನ್ನು ಅವ್ವನ ಮುಂದೆ ತೋಡಿಕೊಂಡರೆ ಆಕೆಗೂ ಒಂದಿಷ್ಟು ನೋವಾದೀತು ಅಷ್ಟೇ; ಪ್ರಯೋಜನವೇನೂ ಆಗಲಾರದು ಎನ್ನುವ ನಿರ್ಧಾರಕ್ಕೆ ನಾನ್ಯಾವತ್ತೋ ಬಂದುಬಿಟ್ಟಿದ್ದೆ. ನಾನು ಅದನ್ನು ಮನಸ್ಸಿನ ಚಿಪ್ಪಿನೊಳಗೆ ಭದ್ರವಾಗಿ ಬಚ್ಚಿಟ್ಟು, ಜಗತ್ತಿನ ನೋಟದಿಂದ ಮರೆಮಾಚಿದ್ದೆ.

ಹಿಂದಿನ ವರ್ಷ ಕಾಲೇಜಿನ ಬೇಸಿಗೆ ರಜೆಯ ಸಂದರ್ಭದಲ್ಲಿ ನಾನು ಹೈದರಾಬಾದ್‌ಗೆ ಪ್ರವಾಸ ಹೋಗಿದ್ದಾಗ ಚುರುಮುರಿ ಮಾಮಾನ ಮನೆಗೂ ಹೋಗಿದ್ದೆ. ಆ ಸಂದರ್ಭದಲ್ಲಿ ಕಾವ್ಯಾಳೂ ಅಲ್ಲಿಗೆ ಬಂದಿದ್ದಳು. ತುಂಟತನ ತೋರುತ್ತಿದ್ದ ಆಕೆಗೆ ನನ್ನ ಅತ್ತೆಯೆಂದರೆ ಪಂಚಪ್ರಾಣವಂತೆ. ಯಾವಾಗ ಬಿಡುವಾದರೂ ಅತ್ತೆಯ ಮನೆಗೆ ಬಂದು ವಾರಗಟ್ಟಲೆ ಉಳಿದುಕೊಂಡು ಹೋಗುತ್ತಿದ್ದಳು. ಅತ್ತೆಗೆ ಆಕೆಯಿಂದ ಕೆಲವು ಸಹಾಯವಾದರೂ, ಕಾವ್ಯಾಳಿಗೆ ಮಾತ್ರ ತನ್ನ ಮನೆಯೆಂಬ ಬಂಧನದಿಂದ ಒಂದಿಷ್ಟು ಬಿಡುಗಡೆ ಸಿಕ್ಕಂತೆ ಆಗುತ್ತಿತ್ತಂತೆ. ಸ್ವಲ್ಪ ಸಂಕುಚಿತ ಮನೋಭಾವದವರಾದ ಆಕೆಯ ತಂದೆ ತಾಯಿ ಸಂಪ್ರದಾಯಗಳಿಗೆ ಸದಾ ಅಂಟಿಕೊಂಡಿರುತ್ತಿದ್ದರಂತೆ. ಹುಡುಗಿಯರು ಹಾಗಿರಬಾರದು, ಹೀಗಿರಬಾರದು, ಅದನ್ನು ಮಾಡಬಾರದು, ಇದನ್ನು ನೋಡಕೂಡದು, ಅದು ಮಾಡಬೇಕು, ಇದು ಮಾಡಬೇಕು, ಹೀಗೆಯೇ ಇರಬೇಕು, ಹಾಗೆಯೇ ನಡೆದುಕೊಳ್ಳಬೇಕು... ಇತ್ಯಾದಿ ನಿಯಮಗಳು. ಅಂತಹ ನಿಯಮಗಳ ಪಾಲನೆ ಸುಶಿಕ್ಷಿತಳಾದ ಕಾವ್ಯಾಳಿಗೆ ಸ್ವಲ್ಪ ಮುಜುಗರವನ್ನು ಉಂಟುಮಾಡುತ್ತಿತ್ತಂತೆ. ಅದಕ್ಕೇ ಕೆಲಸದಲ್ಲಿ ಬಿಡುವಾದರೆ, ಒಂದಿಪ್ಪತ್ತು ಕಿಲೋಮೀಟರ್ ದೂರದಲ್ಲಿದ್ದ ಚುರುಮುರಿ ಮಾಮಾನ ಮನೆಗೆ ಬಂದುಬಿಡುತ್ತಿದ್ದಳು.

ನನಗವಳ ಭೇಟಿ ಆಕಸ್ಮಿಕ. ಆದರೆ, ಅವಿಸ್ಮರಣೀಯ. ವೃತ್ತಿಯಲ್ಲಿ ಕಾಲೇಜು ಉಪನ್ಯಾಸಕನಾದ ನಾನು ಪ್ರತಿನಿತ್ಯವೂ ಅನೇಕ ಹುಡುಗಿಯರನ್ನು ನೋಡುತ್ತಿರುತ್ತೇನೆ; ಸಹೋದ್ಯೋಗಿಗಳಲ್ಲಿ ಕೆಲವರು ನನಗೆ ಹತ್ತಿರವಾಗುವುದಕ್ಕೆ ಪ್ರಯತ್ನಿಸುತ್ತಿದ್ದರು; 'ಸಿಂಗಲ್ ಮ್ಯಾನ್ ಆಫ್ ಲಾರ್ಜ್ ಫೊರ್ಚೂನ್' ಅಂತ ನನ್ನನ್ನು ಅನೇಕರು ಭಾವಿಸಿದ್ದರು; ಅಪ್ಪ ಅವ್ವನ ಬಳಿಗೆ ಕೆಲವು ಪ್ರಪೋಸಲ್‌ಗಳೂ ಬಂದಿದ್ದವು; ಅವ್ವನ ಬಳಿಯಲ್ಲಿ ಒಂದಿಷ್ಟು ಸುಂದರ ಹುಡುಗಿಯರ ಭಾವಚಿತ್ರಗಳು ಇವೆ; ನಾನು ಹರಟೆ ಹೊಡೆಯುತ್ತಿರುವಾಗ, ಆಕೆಯ ತೊಡೆಯ ಮೇಲೆ ಎಳೆಯ ಮಗುವಿನಂತೆ ಮಲಗಿಕೊಂಡಾಗ ಒಂದೊಂದೇ ಫೋಟೊಗಳನ್ನು ಆಕೆ ನನ್ನ ಮುಂದೆ ಇಡುತ್ತಾಳೆ; 'ಇನ್ನು ನೀನು ಅವ್ವನ ತೊಡೆಯನ್ನು ಬಿಡುವಷ್ಟು ದೊಡ್ಡವನಾಗಿದ್ದೀಯ' ಎಂದು ಸೂಕ್ಷ್ಮವಾಗಿ ಹೇಳುತ್ತಾಳೆ. ಇಷ್ಟೆಲ್ಲಾ ಹುಡುಗಿಯರನ್ನು, ಹುಡುಗಿಯರ ಫೋಟೊಗಳನ್ನು ನೋಡಿದರೂ ನನಗೆ ಅವರ‍್ಯಾರ ಮೇಲೂ ಒಲವು ಉಂಟಾಗಿರಲಿಲ್ಲ. ಆದರೆ, ಹೈದರಾಬಾದ್‌ನ ಮಾಮಾನ ಮನೆಯಲ್ಲಿ ಕಾವ್ಯಾಳನ್ನು ನೋಡಿದಾಗ ನಾನು ವಿಚಲಿತನಾಗಿದ್ದೆ.

ಆಕೆಯ ಕಣ್ಣುಗಳಲ್ಲಿ ಕಣ್ಣನ್ನಿಟ್ಟು ನೋಡುವುದಕ್ಕೆ ನನ್ನಿಂದ ಸಾಧ್ಯವಾಗಿರಲಿಲ್ಲ; ಆಕೆಯೊಂದಿಗೆ ಹೆಚ್ಚು ಮಾತನಾಡುವುದಕ್ಕೆ ಮನಸ್ಸು ಹಾತೊರೆಯುತ್ತಿತ್ತು; ದಿನದಲ್ಲಿ ಇಪ್ಪತ್ನಾಲ್ಕು ಗಂಟೆಗಳು ಮಾತ್ರವೇ ಏಕಿವೆ ಎಂದು ಮೊದಲ ಬಾರಿಗೆ ನನ್ನನ್ನು ನಾನು ಪ್ರಶ್ನಿಸಿಕೊಂಡಿದ್ದೆ; ಅದೆಂತಹ ಆಕರ್ಷಣೆ! ಒಂದು ದಿನ ಮಾತ್ರ ಮಾಮಾನ ಮನೆಯಲ್ಲಿ ಉಳಿದುಕೊಳ್ಳಬೇಕೆಂದು ಹೋದವನು, ಒಂದು ವಾರ ಉಳಿದುಕೊಂಡಿದ್ದೆ. ಕಾವ್ಯಾಳ ಜೊತೆಯಲ್ಲಿ ಸುತ್ತಮುತ್ತಲಿನ ಕೆಲವು ಸ್ಥಳಗಳಿಗೆ ಹೋಗಿಬಂದೆ. ನಿಜ ಹೇಳುತ್ತಿದ್ದೇನೆ, ಆ ಎಲ್ಲಾ ದಿನಗಳು ನನ್ನ ಜೀವನದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವುದಕ್ಕೆ ಯೋಗ್ಯವಾದವುಗಳು. ಆ ಒಂದು ವಾರದಲ್ಲಿ ಅವಳು ನನ್ನ ಹೃದಯದಲ್ಲಿ ಖಾಲಿ ಇದ್ದ ಜಾಗವನ್ನು ಆಕ್ರಮಿಸಿಕೊಂಡಿದ್ದಳು. ನಾನು ಕೂಡ ಆಕೆಗೆ ಇಷ್ಟವಾಗಿದ್ದೆ ಎನ್ನುವುದನ್ನು ಆಕೆಯ ವರ್ತನೆಯೇ ಹೇಳುತ್ತಿತ್ತು. ನಾಲಿಗೆ ನೇರವಾಗಿ ಪ್ರೀತಿ–ಪ್ರೇಮದ ವಿಷಯವನ್ನು ತಿಳಿಸದೇ ಇದ್ದರೂ ನಮ್ಮಿಬ್ಬರ